# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ನೀ.ಸ.ವಿ/ಸಾಮಗ್ರಿ/ಟೆಂಡರು/ವಿವ- /2009-10 ದಿನಾಂಕ: 15.06.2009.

## ಅಲ್ಪಾವಧಿ ಟೆಂಡರು ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು ಹಾಗೂ ನಿಯಮಾವಳಿ-2000ರಂತೆ ಶಿರಸಿ ನಗರಸಭೆಯಿಂದ 2009-10 ನೇ ಸಾಲಿಗೆ ಅಂದರೆ 31.03.2010ರ ಅವಧಿವರೆಗೆ ಶಿರಸಿ ನಗರಸಭೆಗೆ ಸೇರಿದ ನೀರು ಸರಬರಾಜು ವಿಭಾಗಕ್ಕೆ ಹಾಗೂ ನೈರ್ಮಲ್ಯ ವಿಭಾಗಕ್ಕೆ ಸಂಬಂಧಪಟ್ಟ ಸಾಮಗ್ರಿಗಳನ್ನು ಸರಬರಾಜು ಮಾಡಲು ಇಚ್ಛಿಸುವವರು ಟೆಂಡರು ಪ್ರಕಟಣೆಯ ವಿವರಣಾ ಪುಸ್ತಕವನ್ನು ರೂ. 500-00 ನ್ನು ಪಾವತಿಸಿ ನಗರಸಭಾ ಕಚೇರಿಯಿಂದ ಪಡೆದುಕೊಳ್ಳತಕ್ಕದ್ದು. ಹಾಗೂ ಸಾಮಗ್ರಿಗಳ ದರಗಳನ್ನು ನಮೂದಿಸಿ ಮೊಹರಾದ ಟೆಂಡರನ್ನು ಈ ಕೆಳಗೆ ವಿವರಿಸಿದ ದಿನಾಂಕಗಳಂದು ಪೌರಾಯುಕ್ತರು, ನಗರಸಭೆ, ಶಿರಸಿರವರಿಗೆ ಖುದ್ದಾಗಿ ತಲುಪಿಸತಕ್ಕದ್ದು. ಸ್ವೀಕೃತವಾದ ಟೆಂಡರಗಳನ್ನು ದಿನಾಂಕ 16-07-2009 ರ ಸಂಜೆ: 5:00 ಘಂಟೆಗೆ ಹಾಜರಿರುವ ಗುತ್ತಿಗೆದಾರರ/ಪೂರೈಕೆದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ರಜೆಯಿದ್ದಲ್ಲಿ ಮುಂದಿನ ಕಚೇರಿ ವೇಳೆಯಲ್ಲಿ ತೆರೆಯಲಾಗುವುದು. ಇಲ್ಲವಾದಲ್ಲಿ ಮುಂದಿನ ದಿನಾಂಕವನ್ನು ತಿಳಿಸಲಾಗುವುದು. ಕಾಲ ಮಿತಿ ಮೀರಿ ಬರುವ ಟೆಂಡರುಗಳನ್ನು ಅಂಗೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ, ಷರತ್ತುಗಳಿಗಾಗಿ ಕಚೇರಿಯ ಕೆಲಸದ ವೇಳೆಯಲ್ಲಿ ಖುದ್ದಾಗಿ ಬಂದು ಕೇಳಿ ತಿಳಿದುಕೊಳ್ಳತಕ್ಕದ್ದು.

**ಗುತ್ತಿಗೆಯ ವೇಳಾಪಟ್ಟಿ (Calender of events) ಈ ಕೆಳಗಿನಂತಿರುತ್ತವೆ.**

1. ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 15-07-2009 (5:30 ಗಂಟೆವರೆಗೆ)
2. ಭರ್ತಿ ಮಾಡಲ್ಪಟ್ಟ ಹಾಗೂ ಮೊಹರಾದ ಟೆಂಡರು ನಮೂನೆಗಳನ್ನು ಸ್ವೀಕರಿಸುವ ದಿನಾಂಕ : 16-07-2009 (4:30 ಗಂಟೆಗೆ)
3. ಸ್ವೀಕೃತ ಟೆಂಡರುಗಳನ್ನು ತೆರೆಯುವ ದಿನಾಂಕ ಮತ್ತು ಸ್ಥಳ : 16-07-2009 (5:00 ಗಂಟೆಗೆ) **ನಗರಸಭೆ ಕಚೇರಿ**

## ಷರತ್ತುಗಳು:-

1. ಪ್ರಕಟಣೆ ಪ್ರಚುರಪಡಿಸಿದ ದಿನಾಂಕದಿಂದ ಖಾಲಿ ಟೆಂಡರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಅಂದರೆ, ದಿನಾಂಕ: 15-07-2009 ರವರೆಗೆ ಟೆಂಡರಿನಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸಬಹುದಾಗಿರುತ್ತದೆ.

2. ಟೆಂಡರುಗಳನ್ನು ಸಲ್ಲಿಸುವವರು ಮುಂಚಿತವಾಗಿ ನೀರು ಸರಬರಾಜು ವಿಭಾಗಕ್ಕೆ ಮುಂಗಡ ಠೇವಣಿ ಮೊತ್ತ ರೂ. 10,000-00 ಗಳನ್ನು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ಪಡೆದು ಪೌರಾಯುಕ್ತರು, ನಗರಸಭೆ, ಶಿರಸಿರವರಿಗೆ ಪಾವತಿಯಾಗುವಂತೆ, ತಗೆದು ಸಲ್ಲಿಸತಕ್ಕದ್ದು.

3. ಉತ್ತಮ ಗುಣಮಟ್ಟದ ಹಾಗೂ ಐ.ಎಸ್.ಐ. ಗುರುತು ಹೊಂದಿರುವ ಸಾಮಗ್ರಿಗಳಿಗೆ ಮಾತ್ರ ದರ ನಮೂದಿಸಬೇಕು.

4. ಐ.ಎಸ್.ಐ. ಗುರುತು ಹೊಂದಿರುವ ಸಾಮಗ್ರಿಗಳಿಗೆ ಐ.ಎಸ್.ಐ. ಗುರುತು ಹೊಂದಿರುವ ಕಂಪನಿಯ ದರಗಳನ್ನು ಹಾಗೂ ಇತರೆ ಕಂಪನಿಯ ಸಾಮಗ್ರಿಗಳು ಇದ್ದ ಪಕ್ಷದಲ್ಲಿ ಅದೇ ಕಂಪನಿಯ ದರಗಳನ್ನು ನಮೂದಿಸುವುದು.

5. ಸಾಮಗ್ರಿಗಳು ಬಾಳಿಕೆ ಬರುವಲ್ಲಿ ನಿಗದಿಪಡಿಸಿದ ಕಾಲಕ್ಕೆ ಮುಂಚಿತವಾಗಿ ದುರಸ್ತಿಗೆ ಬಂದಲ್ಲಿ ಅದನ್ನು ಬದಲಾಯಿಸಿಕೊಡುವ ಷರತ್ತಿಗೆ ಒಳಪಟ್ಟಿರಬೇಕು.

6. ಸಾಮಗ್ರಿಗಳನ್ನು ಸರಬರಾಜು ಮಾಡುವವರು ಮಾರಾಟ ತೆರಿಗೆ ಹಾಗೂ ಆದಾಯ ತೆರಿಗೆ ಪಾವತಿದಾರರಾಗಿರಬೇಕು. ಸಂಬಂಧಪಟ್ಟ ಇಲಾಖೆಯಿಂದ ದೃಢೀಕರಣ ಪತ್ರ ಹಾಜರುಪಡಿಸಬೇಕು.

7. ಟೆಂಡರು ಅಂಗೀಕಾರ ಆದವರು ಸಾಮಗ್ರಿಗಳನ್ನು ನಗರಸಭೆ ಉಗ್ರಾಣಕ್ಕೆ ಸರಬರಾಜು ಮಾಡಲು ಬದ್ಧರಾಗಿತಕ್ಕದ್ದು. ಇದಕ್ಕೆ ಯಾವುದೇ ಇನ್ನಿತರ ವೆಚ್ಚ ನೀಡಲಾಗುವುದಿಲ್ಲ.

8. ಟೆಂಡರು ಅಂಗೀಕಾರರಾದವರು ರೂ. 50-00 ಮೌಲ್ಯದ ಛಾಪಾ ಕಾಗದದಲ್ಲಿ ಸಾಮಗ್ರಿಗಳನ್ನು ವರ್ಷ ಪೂರ್ತಿ ನಗರಸಭೆಯು ನೀಡುವ ಇಂಡೆಂಟಿಗೆ ಅನುಗುಣವಾಗಿ ನಿಗದಿತ ಸಮಯಕ್ಕೆ ಸರಿಯಾಗಿ ಸರಬರಾಜು ಮಾಡುವ ಕುರಿತು ಪೌರಾಯುಕ್ತರಿಗೆ ಕರಾರು ಬರೆದುಕೊಡತಕ್ಕದ್ದು.

9. ಟೆಂಡರು ಅಂಗೀಕೃತರಾದವರು ಸರಬರಾಜು ಮಾಡಿದ ಸಾಮಗ್ರಿಗಳಿಗೆ ನಗರಸಭೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಆಧ್ಯತೆಯ ಮೇಲೆ ಪಾವತಿಸಲಾಗುವುದು. ಒಂದು ವೇಳೆ ಬಿಲ್ ಪಾವತಿ ಮಾಡಲು ತಾಂತ್ರಿಕ ಕಾರಣಗಳಿಂದ ವಿಳಂಬವಾದಲ್ಲಿ ಟೆಂಡರುದಾರರು ಬಿಲ್ ಪಾವತಿಯಾಗುವವರೆಗೆ ಸಹಕರಿಸತಕ್ಕದ್ದು. ಮತ್ತು ಬಿಲ್ ಪಾವತಿ ಮಾಡಲು ತಡವಾದಲ್ಲಿ ಬಿಲ್ಲಿನ ಮೊತ್ತದ ಮೇಲೆ ಯಾವುದೇ ರೀತಿಯ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ. ಮತ್ತು ಬಿಲ್ ಪಾವತಿಗೂ ಸರಬರಾಜಿಗೂ ಸಂಬಂಧ ಕಲ್ಪಿಸುವಂತಿಲ್ಲ. ಸರಬರಾಜು ಆದೇಶ ನೀಡಿದ ತಕ್ಷಣ ಸಾಮಗ್ರಿಗಳನ್ನು ಸರಬರಾಜು ಮಾಡತಕ್ಕದ್ದು.

10. ಟೆಂಡರು ಅಂಗೀಕೃತರಾದವರು ತಾವು ಟೆಂಡರಿನಲ್ಲಿ ನಮೂದಿಸಿದ ದರಕ್ಕೆ ವರ್ಷ ಪೂರ್ತಿ ಸಾಮಗ್ರಿಗಳನ್ನು ಸರಬರಾಜು ಮಾಡತಕ್ಕದ್ದು. ತಪ್ಪಿದ್ದಲ್ಲಿ ಟೆಂಡರಿನ ಬಾಬ್ತು ಭರಿಸಿದ ಮುಂಗಡ ಠೇವಣಿ ಮೊತ್ತವನ್ನು ನಗರಸಭಾ ಲೆಕ್ಕಕ್ಕೆ ಮುಟ್ಟುಗೋಲು ಹಾಕಿಕೊಂಡು ತಮ್ಮ ಟೆಂಡರನ್ನು ರದ್ದುಪಡಿಸಿ ಮರು-ಟೆಂಡರನ್ನು ಕರೆಯುವ ಹಕ್ಕು ಪೌರಾಯುಕ್ತರಿಗೆ ಇರುತ್ತದೆ. ಮತ್ತು ಮರು-ಟೆಂಡರಿನಿಂದ ನಗರಸಭೆಗೆ ಉಂಟಾಗುವ ನಷ್ಟವನ್ನು ಟೆಂಡರುದಾರರಿಂದಲೇ ಭರಿಸಲಾಗುವುದು.

11. ಟೆಂಡರನ್ನು ಅಂಗೀಕರಿಸುವ ಹಾಗೂ ತಿರಸ್ಕರಿಸುವ ಹಕ್ಕನ್ನು ನಗರಸಭೆಯು ಕಾಯ್ದಿರಿಸಿಕೊಂಡಿದೆ.

(ರಮೇಶ್ ಬಿ. ಆಚಾರಿ)
ಅಧ್ಯಕ್ಷರು,
ನಗರಸಭೆ, ಶಿರಸಿ.

(ಜಿ. ರಾಮದಾಸ್)
ಕೆ.ಎಮ್.ಎ.ಎಸ್.
ಪೌರಾಯುಕ್ತರು,
ನಗರಸಭೆ, ಶಿರಸಿ.

# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ನೀ.ಸ.ವಿ./ದರವಾರು/ವಿವ– /2009–10 ದಿನಾಂಕ: 15.06.2009.

## ದರವಾರು ಪ್ರಕಟಣೆ

ವಿಷಯ: 2009–10ನೇ ಸಾಲಿಗೆ ಕೊಳವೆ ಬಾವಿಗೆ ಅಳವಡಿಸಿರುವ ಸಬ್‌ಮರ್ಸಿಬಲ್ ಪಂಪುಗಳ ರಿಪೇರಿಗೆ ಅವಶ್ಯವಿರುವ ಸಾಮಗ್ರಿಗಳು ಪೂರೈಸಿ ಅಳವಡಿಸುವ ಹಾಗೂ ಇತರೇ ಸಂಬಂಧಿಸಿದ ಕಾಮಗಾರಿಗಳ ರಿಪೇರಿ ದರವಾರು ಕುರಿತು.

–o–

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ನಗರಸಭೆಯ ನೀರು ಸರಬರಾಜು ವ್ಯವಸ್ಥೆಗಾಗಿ ಇರುವ ಕೊಳವೆ ಬಾವಿಯ ವಿದ್ಯುಚ್ಛಾಲಿತ ವಿವಿಧ ಹೆಚ್.ಪಿ.ಯ ಸಬ್‌ಮರ್ಸಿಬಲ್ ಪಂಪ್ ಸೆಟ್ಟುಗಳ ಮೋಟಾರ್ ರಿವೈಂಡಿಂಗ್ ಮೋಟಾರ್ ದುರಸ್ತಿ ಹಾಗೂ ಪಂಪ್ ದುರಸ್ತಿ ಕುರಿತು ಸಾಮಗ್ರಿ ಪೂರೈಕೆ ಅಳವಡಿಸಿ ಸರ್ವಿಸಿಂಗ್ ಹಾಗೂ ಕೊಳವೆ ಬಾವಿಯ ಪಂಪ್ ಸೆಟ್ ಎತ್ತಿ ಇಳಿಸುವ ವಾರ್ಷಿಕ ನಿರ್ವಹಣಾ ದುರಸ್ತಿ ಕಾರ್ಯಕ್ಕೆ, ವಿದ್ಯುತ್ ಗುತ್ತಿಗೆದಾರರು ಅಥವಾ ವಿದ್ಯುತ್ ಮ್ಯಾಕಾನಿಕ್ ವರ್ಕಶಾಪ್‌ದಾರರಿಂದ ದರವಾರನ್ನು ಆಹ್ವಾನಿಸಲಾಗಿದೆ.

ದರವಾರುಗಳನ್ನು ಪೂರೈಸಲು ಇಚ್ಛಿಸುವವರು ತಮ್ಮ ದರವಾರು ಪಟ್ಟಿಯನ್ನು ರೂ. 10,000–00 ಇ.ಎಮ್.ಡಿ. ಠೇವಣಿಯೊಂದಿಗೆ ಸೀಲ್ ಬಂದ್ ಲಕೋಟೆಯಲ್ಲಿ ದಿನಾಂಕ: 16–07–2009ರ ಸಾಯಂಕಾಲ 4:30ರ ಒಳಗಾಗಿ ಸಲ್ಲಿಸತಕ್ಕದ್ದು. ಸ್ವೀಕೃತ ದರವಾರುಗಳನ್ನು ದಿನಾಂಕ: 16–07–2009ರಂದು ಸಂಜೆ: 5:00 ಘಂಟೆಗೆ ಹಾಜರಿರುವ ಗುತ್ತಿಗೆದಾರರ ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಅನಿವಾರ್ಯ ಕಾರಣದಿಂದ ಅಂದು ತೆರೆಯಲಾಗದಿದ್ದಲ್ಲಿ ಮರು ದಿನ ಕಛೇರಿ ವೇಳೆಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ಷರತ್ತುಗಳಿಗಾಗಿ ಕಛೇರಿ ವೇಳೆಯಲ್ಲಿ ಖುದ್ದಾಗಿ ಬಂದು ತಿಳಿದುಕೊಳ್ಳಬಹುದು

**ಗುತ್ತಿಗೆಯ ವೇಳಾಪಟ್ಟಿ (Calender of events) ಈ ಕೆಳಗಿನಂತಿರುತ್ತವೆ.**

1. ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 15–07–2009 (5:30 ಗಂಟೆವರೆಗೆ)
2. ಭರ್ತಿ ಮಾಡಲ್ಪಟ್ಟ ಹಾಗೂ ಮೊಹರಾದ ಟೆಂಡರು ನಮೂನೆಗಳನ್ನು ಸ್ವೀಕರಿಸುವ ದಿನಾಂಕ : 16–07–2009 (4:30 ಗಂಟೆಗೆ)
3. ಸ್ವೀಕೃತ ಟೆಂಡರುಗಳನ್ನು ತೆರೆಯುವ ದಿನಾಂಕ ಮತ್ತು ಸ್ಥಳ : 16–07–2009 (5:00 ಗಂಟೆಗೆ) **ನಗರಸಭೆ ಕಚೇರಿ**

ವಿಧಿಸಲಾಗಿರುವ ಪೂರ್ವ ಶರತ್ತುಗಳು:–

1. ಪ್ರಕಟಣೆ ಪ್ರಚುರಪಡಿಸಿದ ದಿನಾಂಕದಿಂದ ಖಾಲಿ ಟೆಂಡರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಅಂದರೆ, ದಿನಾಂಕ: 15–07–2009 ರವರೆಗೆ ಟೆಂಡರಿನಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸಬಹುದಾಗಿರುತ್ತದೆ.

2. ಮುಂಗಡ ಠೇವಣಿಯನ್ನು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕನ ಡಿಮ್ಯಾಂಡ್ ಡ್ರಾಫ್ಟ್ ಮುಖಾಂತರವೇ ಪೌರಾಯುಕ್ತರು, ನಗರಸಭೆ, ಶಿರಸಿಯಲ್ಲಿ ಪಾವತಿಯಾಗುವಂತೆ ತೆಗೆಯಬೇಕು. ನಗದು ರಖಂನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ.

3. ಯಾವುದೇ ಕಾರಣ ತಿಳಿಸದೆ ಮಂಜೂರು ಅಥವಾ ತಿರಸ್ಕರಿಸುವ ಅಧಿಕಾರ ಈ ನಗರಸಭೆಗೆ ಇರುತ್ತದೆ.

4. ರಿವೈಂಡಿಂಗ್ ಕಾರ್ಯಕ್ಕೆ 6 ತಿಂಗಳುಗಳ ಕಾಲ ಗ್ಯಾರಂಟಿ ಭದ್ರತೆ ನೀಡತಕ್ಕದ್ದು.

5. ಪಂಪ್ ಮತ್ತು ಮೋಟಾರದ ಮ್ಯಾಕಾನಿಕಲ್ ನವೀಕರಣಕ್ಕೆ ಒಂದು ವರ್ಷದ ಗ್ಯಾರಂಟಿ ಅವಧಿ ಇರುತ್ತದೆ.

6. ದುರಸ್ತಿ ಮತ್ತು ನವೀಕರಣ ಕಾರ್ಯಕ್ಕೆ ಸಂದರ್ಭಾನುಸಾರ ನಗರಸಭೆಯವರು ವಿಧಿಸುವ ಷರತ್ತುಗಳಿಗೆ ದರವಾರುದಾರರು ಬದ್ಧರಾಗತಕ್ಕದ್ದು.

7. ಗುತ್ತಿಗೆದಾರರು ಮಾರಾಟ ತೆರಿಗೆ, ಆದಾಯ ತೆರಿಗೆ ಪಾವತಿದಾರರಾಗಿರಬೇಕು ಹಾಗೂ ಸಂಬಂಧಪಟ್ಟ ಇಲಾಖೆಯಿಂದ ದೃಢೀಕರಣ ಪತ್ರ ಹಾಜರುಪಡಿಸತಕ್ಕದ್ದು.

8. ಗುತ್ತಿಗೆದಾರರು ಯಾವ ಸಾಮರ್ಥ್ಯದ ಪಂಪ್ ದುರಸ್ತಿಗೆ ಬರುತ್ತದೆಯೋ ಅದೇ ಸಾಮರ್ಥ್ಯದ ಪಂಪನ್ನು ಸ್ಟ್ಯಾಂಡ್ ಬೈ ಅಳವಡಿಸಿ ದುರಸ್ತಿಗೆ ಬಂದಂತಹ ಪಂಪನ್ನು ರಿಪೇರಿ ಮಾಡಲು ಒಯ್ಯತಕ್ಕದ್ದು ಹಾಗೂ ಈ ಕುರಿತು ವಿವಿಧ ಸಾಮರ್ಥ್ಯದ ಸ್ಟ್ಯಾಂಡ್ ಬೈ ಪಂಪುಗಳು ಇರುವ ಬಗ್ಗೆ ದೃಢೀಕೃತ ಪ್ರತಿಯನ್ನು ದರವಾರಿನ ಜೊತೆಗೆ ಲಗತ್ತಿಸತಕ್ಕದ್ದು.

9. ಗುತ್ತಿಗೆದಾರರು ಸಬ್‌ಮರ್ಸಿಬಲ್ ಪಂಪ್ ರಿಪೇರಿ ಮಾಡಲು ಬೇಕಾಗುವ ಸಲಕರಣೆಗಳ ಯಾದಿಯ ದೃಢೀಕೃತ ಪ್ರತಿಯನ್ನು ಟೆಂಡರಿನ ಜೊತೆಗೆ ಸಲ್ಲಿಸತಕ್ಕದ್ದು.

10. ದರವಾರು ಫಾರ್ಮಿನ ಬೆಲೆ ರೂ. 300–00 ಇರುತ್ತದೆ.

(ರಮೇಶ್ ಬಿ. ಆಚಾರಿ)
ಅಧ್ಯಕ್ಷರು,
ನಗರಸಭೆ, ಶಿರಸಿ.

(ಜಿ. ರಾಮದಾಸ್)
ಕೆ.ಎಮ್.ಎ.ಎಸ್.
ಪೌರಾಯುಕ್ತರು,
ನಗರಸಭೆ, ಶಿರಸಿ.